ಮೈಸೂರು ಜಿಲ್ಲಾಪರಿಷತ್‌ನವರಿಂದ ದಿನಾಂಕ 29-1-90ರಂದು ಒಂದು ಲಕ್ಷ ರೂ.ಗಳಿಗೆ ತೆಗೆದುಕೊಳ್ಳಲಾಗಿದೆ.

ಶ್ರೀ ಎಂ. ವೃಷಬೇಂದ್ರಪ್ಪ ಅಧ್ಯಕ್ಷರು ಜಿಲ್ಲಾಪರಿಷತ್ತು ಮೈಸೂರು, ಇವರಿಂದ ದಿನಾಂಕ : 14-8-91ರಲ್ಲಿ ಶಿಲಾನ್ಯಾಸ ಮಾಡಲಾಗಿದೆ. ಕಟ್ಟಡದ ಕೆಲಸಗಳು ಪ್ರಾರಂಭವಾಗದಿರುವುದು ನಿಜ.

ಹಣದ ಕೊರತೆ

ವಿಷಯ : - ರಾಜ್ಯ ವಕ್ಫ್ ಮಂಡಳಿಯ ಆಡಳಿತ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 310(101)

ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ)

ಮಾನ್ಯ ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ವಕ್ಫ್ ಮಂಡಳಿಯ ವ್ಯಾಪ್ತಿಗೆ ಒಳಪಟ್ಟಿರುವ ಸಂಸ್ಥೆಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಇದರಿಂದ ಬರುವ ಆದಾಯ ಪ್ರತಿಯೊಂದು ಜಿಲ್ಲೆಯ ಸಂಸ್ಥೆಗಳಿಗೆ ಸಾಕಾಗುತ್ತದೆಯೇ (ಪ್ರತಿಯೊಂದು ಜಿಲ್ಲೆಯ ಆದಾಯ ಎಷ್ಟೆಷ್ಟು ಎಂಬುದನ್ನು ನೀಡುವುದು)

ಇ) ವಕ್ಫ್ ಆಸ್ತಿಪಾಸ್ತಿಗಳನ್ನು ವೈಯಕ್ತಿಕ ಲಾಭಕ್ಕಾಗಿ ದುರುಪಯೋಗ ಪಡಿಸಿದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ (ಯಾವಯಾವ ಜಿಲ್ಲೆಯಲ್ಲಿ ಎಷ್ಟು ಸಂಪೂರ್ಣ ವಿವರನೀಡುವುದು?

ಶ್ರೀ ಎಸ್.ಎಂ.ಯಾಹ್ಯಾ

(ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು)

ರಾಜ್ಯದಲ್ಲಿ ವಕ್ಫ್ ಮಂಡಳಿಯ ವ್ಯಾಪ್ತಿಗೆ ಒಳಪಟ್ಟಿರುವ 20,930 ಸಂಸ್ಥೆಗಳಿವೆ (ಜಿಲ್ಲಾವಾರು ವಿವರ ಅನುಸೂಚಿ -1ರಲ್ಲಿ ನಮೂದಿಸಿದೆ)

ವಕ್ಫ್ ಸಂಸ್ಥೆಗಳು ತಮ್ಮ ಆದಾಯದಿಂದಲೇ ಪೋಷಿಸಲ್ಪಡುತ್ತಿವೆ ಮತ್ತು ಈ ಆದಾಯವು ಸಾಕಾಗುತ್ತದೆ. (ವಿವರವನ್ನು ಅನುಸೂಚಿ -2ರಲ್ಲಿ ನಮೂದಿಸಿದೆ)

ಹೌದು ವೈಯುಕ್ತಿಕ ಲಾಭಕ್ಕಾಗಿ ವಕ್ಫ್ ಸಂಸ್ಥೆಗಳ ಆಸ್ತಿಗಳ ದುರುಪಯೋಗದ 13 ಪ್ರಕರಣಗಳಿವೆ (ವಿವರವನ್ನು ಅನುಸೂಚಿ -3ರಲ್ಲಿ ನಮೂದಿಸಿದೆ)

ಅನುಸೂಚಿ-1

ರಾಜ್ಯದಲ್ಲಿರುವ ವಕ್ಫ್ ಸಂಸ್ಥೆಗಳ ಸಂಖ್ಯೆ

ಕ್ರಮ ಸಂಖ್ಯೆ	ಜಿಲ್ಲೆ ಹೆಸರು	ಸಂಖ್ಯೆ
1.	ಬೆಂಗಳೂರು	1229
2.	ತುಮಕೂರು	607
3.	ಚಿತ್ರದುರ್ಗ	453

4.	ಶಿವಮೊಗ್ಗ	557
5.	ಕೋಲಾರ	1204
6.	ಮೈಸೂರು	496
7.	ಮಂಡ್ಯ	225
8.	ದಕ್ಷಿಣ ಕನ್ನಡ	422
9.	ಕೊಡಗು	84
10.	ಹಾಸನ	186
11.	ಚಿಕ್ಕಮಗಳೂರು	132
12.	ಬೆಳಗಾಂ	1077
13.	ಬಿಜಾಪುರ	1703
14.	ಧಾರವಾಡ	1886
15.	ಉತ್ತರ ಕನ್ನಡ	186
16.	ಗುಲ್ಬರ್ಗ	4892
17.	ಬೀದರ್	2316
18.	ರಾಯಚೂರು	2642
19.	ಬಳ್ಳಾರಿ	612
	ಒಟ್ಟು	**20,939**

ಅನುಸೂಚಿ 2

ವಕ್ಫ್ ಸಂಸ್ಥೆಗಳ ನಿವ್ವಳ ವಾರ್ಷಿಕ ಆದಾಯದ ಪಟ್ಟಿ (ಜಿಲ್ಲಾವಾರು)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನಿವ್ವಳ ವಾರ್ಷಿಕ ಆದಾಯ
1.	ಬೆಂಗಳೂರು (ನಗರ)	73,73,303.50
2.	ಬೆಂಗಳೂರು (ಗ್ರಾಮಾಂತರ)	3,47,515.17
3.	ತುಮಕೂರು	11,20,323.17
4.	ಕೋಲಾರ	6,27,021.50
5.	ಶಿವಮೊಗ್ಗ	7,69,529.17
6.	ಚಿತ್ರದುರ್ಗ	8,39,060.17
7.	ಮೈಸೂರು	25,00,000.00
8.	ಮಂಡ್ಯ	11,66,000.67
9.	ಹಾಸನ	5,80,775.00
10.	ಚಿಕ್ಕಮಗಳೂರು	6,67,892.50
11.	ಕೊಡಗು	1,96,900.00

12.	ದಕ್ಷಿಣ ಕನ್ನಡ	6,42,187.17
13.	ಬೆಳಗಾಂ	9,22,304.83
14.	ಬಿಜಾಪುರ	3,21,581.00
15.	ಧಾರವಾಡ	12,23,439.50
16.	ಉತ್ತರ ಕನ್ನಡ	9,88,646.00
17.	ಗುಲ್ಬರ್ಗ	7,32,637.00
18.	ಬೀದರ್	2,14,081.17
19.	ರಾಯಚೂರು	4,86,709.50
20.	ಬಳ್ಳಾರಿ	5,24,708.33
	ಒಟ್ಟು	**2,22,45,281.00**

ಅನುಸೂಚಿ-3

ರಾಜ್ಯದಲ್ಲಿ ದುರುಪಯೋಗಕ್ಕೆ ಒಳಪಟ್ಟಿರುವ ವಕ್ಫ್ ಆಸ್ತಿಗಳ ವಿವರ

ಕ್ರಮ ಸಂಖ್ಯೆ	ವಕ್ಫ್ ಸಂಸ್ಥೆಗಳ ಹೆಸರು
1.	ಹಜರತ್ ವಲಿ. ಮೊಹೋಮ್ಮದ್ ಮಕಾನ್ ಹೊಸ ಕೋಟೆ, ಬೆಂಗಳೂರು (ಗ್ರಾಮಾಂತರ)
2.	ಹಜರತ್ ಮರಿಯಮ್ ಬಿನ್ ಬುದ್ದಾನ್ ಮಕಾನ್, ಹೊಸಕೋಟೆ, ಬೆಂಗಳೂರು (ಗ್ರಾಮಾಂತರ)
3.	ಖಾಜ ಸರ್ವೀಸ್ ಮದ್ದೂರ್, ಮಂಡ್ಯ ಜಿಲ್ಲೆ
4.	ಜಾಮಿಯ ಮಸೀದಿ, ಉಡುಪಿ,
5.	ಸರ್ವೇ ನಂ.38 ಮತ್ತು 47 ಶ್ರೀನಹಳ್ಳಿ ಗ್ರಾಮ ದಕ್ಷಿಣ ಕನ್ನಡ (ಸಂಸ್ಥೆಯ ಹೆಸರು ಗೊತ್ತಿಲ್ಲ)
6.	ಜಾಮಿಯ ಮಸೀದಿ, ಠಾಕೂರ್ ಗ್ರಾಮ, ಮಂಗಳೂರು ತಾಲ್ಲೂಕು.
7.	ಗುರುವೈರನಕೆರೆ ಜುಮ್ಮಾ ಮಸೀದಿ, ಬೆಳ್ತಂಗಡಿ, ಮಂಗಳೂರು ತಾಲ್ಲೂಕು.
8.	ಮುಸ್ಲಿಂ ಸ್ಮಶಾನ, ಕೌಡ್ಲಿ ಗ್ರಾಮ, ಸಿದ್ದಾಪುರ ತಾಲ್ಲೂಕು.
9.	ಮಸ್ಜೀದ್ ಇ ಆಜಾಮ್ ರಾಮಾನ್ ಬೈಲ, ಸಿರಸಿ ಟೌನ್.

10. ಲಾಡ್ ಖಾನ್ ಮಸೀದಿ ಮತ್ತು ಸೌದಾಗರ್ ಆಷೂರ್‌ಖಾನ್, ಬಳ್ಳಾರಿ ಇದರ ಆಸ್ತಿ. ಈ ವಿಷಯವು ವಕ್ಫ್ ವಿಚಾರಣಾ ಆಯೋಗದ ವಿಚಾರಣೆ ಸಂಖ್ಯೆ ಐಎನ್‌ಕ 25(ಎ) 90ರಂತೆ ವಿಚಾರಣೆಯಲ್ಲಿದೆ.

11. ಬೀದರಿನ ಮೊಹೊಮ್ಮದ್ ಗವಾನ್ ಅರಬ್ಬಿ ಮದರಸದ ಆಸ್ತಿ. ಇದು ಸಂಖ್ಯೆ ಐಎನ್‌ಕ್ಯೂ 215 :90ರಂತೆ ವಕ್ಫ್ ವಿಚಾರಣಾ ಆಯೋಗದ ಮುಂದಿದೆ.

12. ಬೀದರಿನ ಹಜರತ್ ಷಾ ಖಾಮೂಷ್ ಆಷೂರ್‌ಖಾನ್ ಇದರ ಕಟ್ಟಡದ ದುರಸ್ತಿಯೋಗ. ಇದು ಸಂಖ್ಯೆ ಐಎನ್‌ಕ್ಯೂ 234 90ರಂತೆ ವಕ್ಫ್ ವಿಚಾರಣಾ ಆಯೋಗದ ಮುಂದಿದೆ.

13. ಬೆಂಗಳೂರಿನ ಪುಳಿಯಾರ್ ಕೋಯಲ್ ಸ್ಟ್ರೀಟ್‌ನಲ್ಲಿನ ಕುಲ್‌ಸುಮ್ ಟ್ರಸ್ಟ್ ಆಷೂರ್ ಖಾನದ ಆಸ್ತಿಯನ್ನು ಕಾನೂನು ಬಾಹಿರವಾಗಿ ಕ್ರಯ ಮಾಡಿರುವುದು.

ವಿಷಯ : – ತಾಂತ್ರಿಕ ಹಾಗೂ ವೈದ್ಯಕೀಯ ಕಾಲೇಜುಗಳ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾದವರ ಸಂಖ್ಯೆ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 312(582)

ಶ್ರೀ ಡಿ.ಆರ್.ಪಾಟೀಲ್ (ಗದಗ್)

ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಪ್ರಸ್ತುತ ವರ್ಷ ನಡೆಸಿದ ತಾಂತ್ರಿಕ ಹಾಗೂ ವೈದ್ಯಕೀಯ ಕಾಲೇಜುಗಳ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ. ಉಚಿತ ಸೀಟುಗಳನ್ನು ಪಡೆದ ಅಭ್ಯರ್ಥಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡಿರಿ)

ಇ. ಹಣ ಸಂದಾಯ ಮಾಡುವ ಸೀಟುಗಳನ್ನು ಪಡೆದ ಅಭ್ಯರ್ಥಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡಿ)

ಶ್ರೀ ಎಸ್.ಎಂ.ಯಾಹ್ಯಾ
(ಉನ್ನತ ಶಿಕ್ಷಣ ಸಚಿವರು)

1993-94ನೇ ಸಾಲಿಗೆ ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ.